ಆಪಾದನೆ ಬಂದಿರುವುದು ಇದೇ ಮೊದಲನೆಯ ಸಾರಿ ಅಲ್ಲವೇ, ಸ್ವಾಮಿ, ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಿಂದೆ ಇಂಥಾ ಆಪಾದನೆ ಬಂದಿರುವುದು ನನಗೆ ಗೊತ್ತಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಯಾವ ಅಧ್ಯಾಪಕರ ಮೇಲೆ ಈ ರೀತಿ ಆಪಾದನೆ ಬಂದಿದೆ ?

Sri A. G. RAMACHANDRA RAO.—I want notice about those allegations. The allegations appearing in the Press have been referred to the Committee.

ಶ್ರೀ ಪಿ. ಆರ್. ರಾಮಯ್ಯ.—ತಾವು ಈ ವಿಷಯ ಜನರ ಮನಸ್ಸನ್ನು ಬಹಳವಾಗಿ ಕದಡಿದೆ, ಅದಕ್ಕೇ ಒಂದು ಸಮಿತಿ ನೇಮಕವಾಗಿದೆ, ಪತ್ರಿಕೆಗಳಲ್ಲಿ ಲೇಖನ ಬಂದಿದೆಯೆಂದು ಹೇಳಿದಿರಿ. ಯಾವ ಅಧ್ಯಾಪಕರು ಎನ್ನುವುದು ತಮ್ಮ ಗಮನಕ್ಕೆ ಬಂದಿಲ್ಲ ಎಂದು ಹೇಳುತ್ತೀರಿ, ಇದೇನು, ಸ್ವಾಮಿ!

ಶ್ರೀ ಎ. ಜಿ. ರಾಮಚಂದ್ರರಾವ್.—ಪತ್ರಿಕೆಗಳಲ್ಲಿ ಬಂದಿರತಕ್ಕ ಅಧ್ಯಾಪಕರು ಯಾರು ಎಂಬುದನ್ನು ಅವರೂ ನಮೂದಿಸಿಲ್ಲ. ಅದು ಪತ್ರಿಕೆಯಲ್ಲೇ ಇದೆ. ಅಷ್ಟೇ ಸರ್ಕಾರದವರಿಗೆ ಗೊತ್ತಿರುವುದು.

ಶ್ರೀ ಪಿ. ಆರ್. ರಾಮಯ್ಯ.—ಈಗ ಯಾವ ಸ್ಥಿತಿಯಲ್ಲಿದೆ ಆ ವಿಚಾರಣೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಣೆ ನಡೆಯುತ್ತಾ ಇದೆ.

ಶ್ರೀ ಪಿ. ಆರ್. ರಾಮಯ್ಯ.—ವಿಚಾರಣೆ ಫಲ ತಾಂಶ ಬಂದಮೇಲೆ, ಅದರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳತಕ್ಕವರು ಯಾರು, ಸ್ವಾಮಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ನೋಡಬೇಕು. ಏನು ಶಿಫಾರಸನ್ನು ಮಾಡುತ್ತಾರೆ ಎಂಬುದನ್ನು ನೋಡಿ ತೀರ್ಮಾನ ಮಾಡಬೇಕು.

ಶ್ರೀ ಪಿ. ಆರ್. ರಾಮಯ್ಯ.—ಸರ್ಕಾರದವರಿಗೆ ಈ ವಿಷಯದಲ್ಲಿ ಎಷ್ಟು ಮಟ್ಟಿಗೆ ಜವಾಬ್ದಾರಿ ಇದೆ, ಸ್ವಾಮಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಷ್ಟುಮಟ್ಟಿನ ಜವಾಬ್ದಾರಿ ಎನ್ನುವುದೂ ಕೂಡ ಅವರ ಶಿಫಾರಸಿನ ಮೇಲೆ ನಿಂತಿರುತ್ತದೆ.

ಶ್ರೀ ಪಿ. ಆರ್. ರಾಮಯ್ಯ.—ಈ ವಿಷಯ ಯೂನಿವರ್ಸಿಟಿಗೆ ಮಾತ್ರವೇ ಅಲ್ಲದೆ, ವಿದ್ಯಾಭ್ಯಾಸವನ್ನು ಕೊಡಿಸಿನತಕ್ಕ ಎಲ್ಲಾ ತಂದೆ ತಾಯಿಗಳಿಗೂ ಸಂಬಂಧಿಸಿದ್ದು ಮತ್ತು ಅಖಿಲಪ್ರಜಾವರ್ಗಕ್ಕೇ ಸಂಬಂಧಿಸಿದ್ದು. ಆದ್ದರಿಂದ ಸರ್ಕಾರದವರು ತೀವ್ರವಾಗಿ ಈ ವಿಷಯದಲ್ಲಿ ಆಸಕ್ತವಹಿಸಿ, ವರದಿಯನ್ನು ತರಿಸಿಕೊಂಡು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ, ಸ್ವಾಮಿ?

ಶ್ರೀ ಎ. ಜಿ. ರಾಮಚಂದ್ರರಾವ್.—ವರದಿ ಬಂದ ಮೇಲೆ ಅದನ್ನು ತೀವ್ರವಾಗಿ ಆಲೋಚನೆ ಮಾಡೋಣ.

Committee to enquire into representations of Electrical Department Employees' Union.

Q.—869. Sri S. GOPALA GOWDA (Sagar–Hosanagar).—

Will the Government be pleased to state:—

(*a*) whether they have appointed a three-man Committee to enquire into the representations made by the Government Electrical Department Employees' Union ;

(*b*) if they have constituted one, who the members of that Committee are ;

(*c*) whether the Union had sent a panel of names out of which to select one to be on the Committee ;

(*d*) what are the names of the persons given in the panel ;

(*e*) whether it is a fact that they agreed to appoint a person of the judiciary as the Chairman of the Committee ;

(*f*) how many times the Committee has met so far ;

(*g*) the terms of reference of that committee ?

A.—Dr. R. NAGAN GOWDA (Minister for Agriculture).—

(*a*) Yes.

(*b*) Sri M. S. Swaminathan, I.A.S., Additional Director of Industries and Commerce (*Chairman*).

Sri N. D. M. Appa, Deputy Chief Electrical Engineer.

Sri K. Kannan, President, Government Electrical Department Employees' Union.

(*c*) Yes.

(*d*) Sri K. Kannan, President, Government Electrical Department Employees' Union.

Sri Mulka Govinda Reddy, M.L.A.

Sri S. Gopala Gowda, M.L.A.

(*e*) No.

(*f*) Thrice.

(*g*) To examine the representations of the Employees' Union and to make recommendations to Government.

ಶ್ರೀ ಎಸ್. ಗೋಪಾಲಗೌಡ.—ಮುಷ್ಕರವನ್ನು ಯಾವ ಪರಿತಿನ ಮೇಲೆ ನಿಲ್ಲಿಸಲಾಯಿತು, ಸ್ವಾಮಿ?

Dr. R. NAGAN GOWDA.—On 4th February 1955, Government have issued an order in which they have stated that certain representations were made by the Union of the Employees of the Electrical Department about their scales of pay and other conditions of service. These were discussed some time ago but no settlement was reached. The Union decided.....

Sri P. R. RAMAIYA.—On a point of order. This question has come up before the Assembly several times. Is it in order to go on with the same question again and again?

Mr. SPEAKER.—I will see the supplementaries put. I won't allow those questions which we are asked and answered already.

Dr. R. NAGAN GOWDA.—The Union thereupon called a strike which has since been called off in pursuance of the Government's decision to appoint a Committee to go into the representations and to make recommendations to the Government.

ಶ್ರೀ ಎಸ್. ಗೋಪಾಲಗೌಡ.—ಆ ಮುಷ್ಕರವನ್ನು ನಿಲ್ಲಿಸುವಾಗ ಸರ್ಕಾರದವರು ನೇಮಕಮಾಡುವುದಾಗಿ ತಿಳಿಸಿದ್ದಂಥ ಎಕ್ಸ್‌ಕ್ಯೂರಿ ಸಮಿತಿಗೆ ಒಬ್ಬ ಜುಡಿಷಿಯರ್ ಅಧಿಕಾರಿಗಳನ್ನು ಥೇರ್ಮನ್ನರನ್ನಾಗಿ ನೇಮಿಸಬೇಕೆಂದು ಆಗಿದ್ದ ಒಡಂಬಡಿಕೆಯ ಪ್ರಕಾರ ಆಗಲಿ ಎಂದು ಸರ್ಕಾರದವರು ಒಪ್ಪಿಕೊಂಡಿರಲಿಲ್ಲವೆ?

Sri A. G. RAMACHANDRA RAO.—That question has been answered.

ಶ್ರೀ ಎಸ್. ಗೋಪಾಲಗೌಡ.—ಆ ಸಮಿತಿಯವರು ಎಷ್ಟು ದಿವಸಗಳೊಳಗಾಗಿ ಅವರ ವರದಿಯನ್ನು ಸರ್ಕಾರಕ್ಕೆ ಕೊಡಬೇಕೆಂದು ಹೇಳಿದ್ದೀರಿ?

ಡಾ॥ ಆರ್. ನಾಗನಗೌಡ.—ಅದನ್ನು ಐದು ತಿಂಗಳೊಳಗಾಗಿ ಸರ್ಕಾರಕ್ಕೆ ಕೊಡಬೇಕೆಂದು ತಿಳಿಸಲಾಗಿದೆ.

Katnaikanahalli Tank (Restoration).

Q.—698. Sri V. MASIYAPPA (Hiriyur).—

Will the Government be pleased to state:—

(*a*) when the estimate for the restoration of the tank at Katnaikanahalli in Hiriyur Taluk was prepared;

(*b*) whether it has been sanctioned?

A.—Sri A. G. RAMACHANDRA RAO (Minister for Law and Education) [on behalf of Sri Kadidal MANJAPPA (Minister for Revenue and Public Works)].—

(*a*) During 1953.

(*b*) Not yet.

ಶ್ರೀ ವಿ. ಮಸಿಯಪ್ಪ.—ಅಂದಾಜು ತಯಾರಾಗಿ ಎರಡು ವರ್ಷಗಳ ಮೇಲಾಗಿದೆ ಈ ಕೆರೆಗೆ ಸಂಬಂಧಪಟ್ಟ ರೈತರುಗಳು ಕೊಡತಕ್ಕಂಥ ಕಾಂಟ್ರಿಬ್ಯೂಷನ್, ಮುಚ್ಚಳಿಕೆ ಇತ್ಯಾದಿ ಕೆಲಸಗಳೆಲ್ಲಾ ಪೂರೈಸಿದ್ದರೂ ಈ ಕೆರೆಯ ರೆಸ್ಟೋರೇಷನ್ ಕೆಲಸವನ್ನು ತಾವೇಕೆ ಇನ್ನೂ ಕೈಗೊಂಡಿಲ್ಲ?

ಶ್ರೀ ಎ. ಜಿ. ರಾಮಚಂದ್ರರಾವ್.—1953ರಲ್ಲಿ ಅಂದಾಜು ತಯಾರಾಗಿ ಬಂದಿರುತ್ತದೆ. ಇದಕ್ಕೆ ಸಂಬಂಧಪಟ್ಟ ಫಾರ್‌ಮ್ಯಾಲಿಟೀಸ್ ನಡೆಯುತ್ತಿವೆ. ಈಗ ಆ ಕೆರೆಯನ್ನು ರೆಸ್ಟೋರ್ ಮಾಡಿದರೆ ಸುಮಾರು 13 ಎಕರೆ 15 ಗುಂಟೆ ಜಮೀನಿಗೆ ನೀರು ನರಬರಾಯಿ ಆಗುತ್ತದೆಯೆಂದು ತಿಳಿದುಬಂದಿದೆ. ಆದರೆ ಇತ್ತೀಚೆಗೆ ಆ ಕೆರೆಯ ಏರಿಯನ್ನು ಇನ್ನೂ ಹೆಚ್ಚಿಸಬೇಕೆಂದು ಅರ್ಜಿ ಹಾಕಿಕೊಂಡಿದ್ದಾರೆ. ಇದರಿಂದ ಬೇರೆ ಕೆರೆಗಳಿಗೆ ತೊಂದರೆಯಾಗುತ್ತದೆಂದು ತಿಳಿದುಬಂದುದರಿಂದ ಆ ಕೆಲಸವನ್ನು ಪ್ರಾರಂಭಿಸಲಿಕ್ಕಾಗಲಿಲ್ಲ.

ಶ್ರೀ ವಿ. ಮಸಿಯಪ್ಪ.—ಈಗ ತಾವು ಈ ಕೆರೆಯ ಏರಿಯನ್ನು ಹೆಚ್ಚಿಸಿದರೆ ಬೇರೆ ಕೆರೆಗೆ ತೊಂದರೆಯಾಗುತ್ತದೆಂದು ಹೇಳೋಣವಾಯಿತು. ಆ ಬೇರೆ ಕೆರೆಗಳು ಯಾವುವು?

ಶ್ರೀ ಎ. ಜಿ. ರಾಮಚಂದ್ರರಾವ್.—ಬಗ್ಗನಾಡು ಕೆರೆ.

ಶ್ರೀ ವಿ. ಮಸಿಯಪ್ಪ.—ಹಿಂದೆ ಈ ಕೆರೆ ಒಡೆದು ಹೋಗುವುದಕ್ಕೆ ಮುಂಚೆ 13 ಎಕರೆ ಸಾಗುವಳಿಗೆ ನೀರು ಬರುತ್ತಿತ್ತು. ಅಷ್ಟು ಅಚ್ಚುಕಟ್ಟಿಗೆ ಸರಿಯಾಗಿ ನೀರು ಸರಬರಾಯಿ ಆಗುವಂತೆ ಇದನ್ನು ರಿಪೇರಿ ಮಾಡಲು ಪರಿಶೀಲನೆ ಮಾಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡಿದ್ದೇವೆ. ಆದರೆ ಈಗ ಕೆರೆ ಏರಿಯನ್ನು ಹೆಚ್ಚು ಮಾಡಬೇಕೆಂದು ಕೇಳಿರುತ್ತಾರೆ. ಆದುದರಿಂದ ಅದನ್ನು ಪುನಃ ಪರಿಶೀಲಿಸಬೇಕಾಗುತ್ತದೆ.

ಶ್ರೀ ವಿ. ಮಸಿಯಪ್ಪ.—ಹೋಗಲಿ ತಾವು ಆ ಒರಿಜಿನರ್ ಕೆಪ್ಯಾಸಿಟಿ ಏನಿತ್ತೋ ಅಷ್ಟಕ್ಕಾದರೂ ಜಾಗ್ರತೆಯಾಗಿ ಇದನ್ನು ರೆಸ್ಟೋರ್ ಮಾಡಿಸುವಂತೆ ಏರ್ಪಾಡು ಮಾಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗಾದರೆ ಆಗಬಹುದು.

Malligemetlu Basaveswara Temple (Renovation).

Q.—691. Sri S. KARIAPPA (Virupakshapura).—

Will the Government be pleased to state:—

(*a*) whether the plan and estimates for the renovation of the Basaveswara Temple of Malligemetlu in Kanakapura Taluk have been submitted to Government for sanction;

(*b*) the stage at which they stand at present?

A.—Sri A. G. RAMACHANDRA RAO (Minister for Law and Education) [on behalf of Sri Kadidal MANJAPPA (Minister for Revenue and Public Works)].—

(*a*) No.

(*b*) The Muzrai Commissioner has taken action to get an estimate prepared.

ಶ್ರೀ ಎಸ್. ಕರಿಯಪ್ಪ.—ಈ ದೇವಸ್ಥಾನ ಚೋಳರ ಕಾಲದ ದೇವಸ್ಥಾನ ಎನ್ನುವುದು ಸರ್ಕಾರದವರಿಗೆ ಗೊತ್ತಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ವಿಚಾರ ಮಾಡುತ್ತೇವೆ.